ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ : 23ನೇ ಜುಲೈ, 2019

ರಾಜ್ಯದಲ್ಲಿ ಅಂತರ್ಜಲ ಸ್ಥಿತಿಗತಿಗಳ ಬಗ್ಗೆ

ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-

536 (722) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಅಂತರ್ಜಲ ಸ್ಥಿತಿಗತಿಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಮಾಹಿತಿ ಇದೆಯೇ ;

(ಆ) ಇದ್ದಲ್ಲಿ 10 ವರ್ಷಗಳಲ್ಲಿ ರಾಜ್ಯದ ಅಂತರ್ಜಲ ಕುಸಿದಿರುವ ಪ್ರಮಾಣದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು;

(ಇ) ರಾಜ್ಯದ ನಗರ ಪ್ರದೇಶಗಳು ಹಾಗೂ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಮೂಲವಾಗಿ ಕೊಳವೆ ಬಾವಿಗಳ ಮೇಲೆ ಶೇಕಡವಾರು ಎಷ್ಟು ಜನ ಅವಲಂಬಿಸಿದ್ದಾರೆ; (ಗ್ರಾಮಗಳ/ನಗರಗಳ ಬಗ್ಗೆ ಮಾಹಿತಿ ನೀಡುವುದು)

(ಈ) ಜಿಲ್ಲಾವಾರು ಅಂತರ್ಜಲ ಮಳೆನೀರು ಕೊಯ್ಲು ಹಾಗೂ ಇತರೆ ಭೂಗೋಳ ನಿರ್ಮಾಣ (Geo- Structure) ಬಗ್ಗೆ ವರದಿ ಸರ್ಕಾರದಲ್ಲಿ ಇದೆಯೇ; ಇದ್ದಲ್ಲಿ ಅದರ ವರದಿ ನೀಡುವುದು;

(ಉ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಅಂತರ್ಜಲದ ನೀರು ಕಲುಷಿವಾಗಿರುವ (Contamination)) ಬಗ್ಗೆ ಮಾಹಿತಿ ಇದೆ;

(ಊ) ಇದ್ದಲ್ಲಿ ಜಿಲ್ಲಾವಾರು, ಹೋಬಳಿ ಮತ್ತು ಗ್ರಾಮವಾರು ಮಾಹಿತಿ ನೀಡುವುದು ಇದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು ? (ಸಂಪೂರ್ಣ ಮಾಹಿತಿ ನೀಡುವುದು)